## ನೀವೇ ಟೀವಿ ಆರಂಭಿಸಿ

ಕನ್ನಡದ ಯಾವುದೇ ಸುದ್ದಿ ವಾಹಿನಿಗಳನ್ನು ನೋಡಿದರೂ ಅನೈತಿಕ ಚಟುವಟಿಕೆಯ ಸಂಗತಿಯೇ ವಿಜೃಂಭಿಸುತ್ತಿರುವುದು ಕಾಣುತ್ತಿದೆ. ತಾಯಿ ತಂದೆ ಮತ್ತು ಮಕ್ಕಳು ಒಟ್ಟಿಗೆ ಕುಳಿತು ನೋಡಲು ಅಸಾಧ್ಯ ಅನ್ನುವಷ್ಟು ಮುಜುಗರ. ಏಕೆ 'ದಿ ಮೈಸೂರು ಪ್ರಿಂಟರ್ಸ್'ನವರು ಒಂದು ಒಳ್ಳೆಯ ವಿಶ್ವಾಸಾರ್ಹ ಸುದ್ದಿ ವಾಹಿನಿ ಆರಂಭಿಸಬಾರದು. 'ಸುಧಾ' ವಾರ ಪತ್ರಿಕೆಯನ್ನು ಮನೆ ಮಂದಿ ಓದುವ ಹಾಗೆ, ಮನೆ ಮಂದಿ ನೋಡುವ ಶುದ್ಧ ಕನ್ನಡ ಚಾನೆಲ್ ಪ್ರಾರಂಭ ಮಾಡಬಹುದು. ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಚಾನಲ್‌ಗಳು ತೋರಿಸುತ್ತಿಲ್ಲ.

–ರಮೇಶ್ ಜಾವಳಗಿ, ಬನಹಟ್ಟಿ

## ಊಟದಲ್ಲಿ ಆರೋಗ್ಯ

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' ಇಷ್ಟ ಆಗಲು ಸಿಹಿಕಹಿ ಚಂದ್ರು ಅವರು ಅಡುಗೆ ಮಾಡುವ ಶೈಲಿ ಹಾಗೂ ಅವರು ಆ ಪದಾರ್ಥಗಳಿಗೆ ಇಡುವ ಹೆಸರು ಕಾರಣ. ಅದೇ ರೀತಿ ಡಾಕ್ಟರ್ ಗೌರಿ ಸುಬ್ರಮಣ್ಯ ಅವರು ತಿಳಿಸಿ ಕೊಡುವ ಆರೋಗ್ಯ ವೃದ್ಧಿಗೆ ಸಂಬಂಧಿಸಿದ ಅಡುಗೆ ಕೂಡ ಇಷ್ಟವಾಗುತ್ತದೆ. ವೀಕ್ಷಕರ ಆರೋಗ್ಯ ಸಮಸ್ಯೆಗಳಿಗೆ ಮನೆ ಮದ್ದುಗಳನ್ನು ಎಷ್ಟು ಸರಳವಾಗಿ ತಿಳಿಸಿ ಕೊಡುತ್ತಾರೆ. ಯಾವುದೇ ಅಡ್ಡಪರಿಣಾಮಗಳಿಲ್ಲದೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ಅವರು ತಿಳಿಸಿಕೊಡುವ ಮನೆ ಮದ್ದುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರೆ ಒಳ್ಳೆಯದು.

–ಕೆ.ಎಸ್. ಸವಿತ, ಬೆಂಗಳೂರು

## ವೈರುಧ್ಯ

ಕಲರ್ಸ್‌ನ 'ಗೀತಾ'ದ ಗೀತಾಳನ್ನು ಹಲವು ಬಾರಿ ಸಾವಿನ ದವಡೆಯಿಂದ ಪಾರುಮಾಡಿದರೂ ವಿಜಯ ಬಗ್ಗೆ ಕಿಂಚಿತ್ತೂ ಕೃತಜ್ಞತೆ ಇಲ್ಲದ ಗೀತಾಳಿಗಿಂತ ಕಾಡಿನ ಕನ್ಯೆ ದಾಸವಾಳವೇ ಉತ್ತಮ ಮನೋಭಾವದವಳು ಎನಿಸುತ್ತದೆ.

–ಸಿ.ಆರ್. ಶ್ರೀನಿವಾಸ, ಬೆಂಗಳೂರು

## ತಲೆ ನೋವು ಬರಿಸುವ ಚಾನೆಲ್

ಸುಮಾರು ಒಂದು ತಿಂಗಳಿನಿಂದ ನ್ಯೂಸ್ ಚಾನೆಲ್ ಯಾವುದನ್ನೇ ನೋಡಲಿ ಕೂಡಲೇ ತಲೆನೋವು ಬರುತ್ತಿದೆ ಮಾರ್ಚ್ ತಿಂಗಳಿನಿಂದ ಶುರುವಾದ ತಲೆ ನೋವು ಉಪಶಮನ ಆಗುವ ಲಕ್ಷಣವೇ ಕಾಣುತ್ತಿಲ್ಲ. ಅಮೃತಾಂಜನ ಡಬ್ಬಿಗಳು ಖಾಲಿಯಾಗಿ ಜೊತೆಗೆ ಪರ್ಸಿನ ತೂಕ ಕಡಿಮೆ ಆಯಿತು. ತಲೆ ನೋವು ಕಡಿಮೆ ಆಗಲಿಲ್ಲ. ಹೇಳಿದ್ದೇ ಹೇಳಿ ಹೇಳಿ ನಾವು ಕೇಳಿ ಕೇಳಿ ಮೂರ್ಛೆ ಹೋಗುವ ಪರಿಸ್ಥಿತಿ ಉಂಟಾಯಿತು. ಕೇಬಲ್ ನವರಿಗೆ ಡಿಸ್ ಕನೆಕ್ಷನ್ ಕಟ್ ಮಾಡು ಎಂದು ಹೇಳಿಯೂ ಆಯ್ತು. ಆತ ನಗುತ್ತಾ ಹೋಗಿದ್ದೂ ಆಯ್ತು. ಸಿಡಿ ಸಿಡಿ ವಿಷಯ ತಲೆ ಸಿಡಿದು ಹೋಯ್ತು. ನ್ಯೂಸ್ ಚಾನೆಲ್ ಬಿಟ್ಟು ಬೇರೆ ಚಾನೆಲ್ ನೋಡೋಣ ಅಂದ್ರೆ ಅದರಲ್ಲಿ ಬರುವ ಸಿನಿಮಾ ಅದರಲ್ಲೂ ಕನ್ನಡ ಸಿನಿಮಾ ಹೇಳುವುದೇ ಬೇಡ. ಒಂತರಾ ಚಿತ್ರ ಹಿಂಸೆ. ಸಾಕಪ್ಪ ಸಾಕು ಎನಿಸುತ್ತದೆ. ಬೆಳಿಗ್ಗೆ ಹೋಗಿ ಸಂಜೆಗೆ ಮನೆಗೆ ಬಂದು ಮನರಂಜನೆಗಾಗಿ ಟೀವಿ ಮುಂದೆ ಕುಳಿತರೆ ಮುಗಿಯಿತು. ಮುಖ್ಯ ವಾರ್ತೆ ಏನಾದರೂ ಇದೆಯಾ ಎಂದು ಕೈ ನ್ಯೂಸ್ ಚಾನೆಲ್ ಕಡೆ ರಿಮೋಟ್ ಒತ್ತಿದರೆ ಅವತ್ತಿನ ಎಲ್ಲಾ ಬೇಸರ ಒಟ್ಟಿಗೆ ಅಮರಿಕೊಂಡಂತಾಗಿ ತಲೆಯನ್ನು ಪರ ಪರ ಅಂತ ಕೆರೆದು ಕೊಳ್ಳುವಂತಾಗುತ್ತೆ. ಮೆದುಳಿನಲ್ಲಿ ಕೈ ಆಡಿಸಿದಂತಾಗುತ್ತೆ. ದಿನ ಪತ್ರಿಕೆಯಲ್ಲಿ ನಾಲ್ಕೈದು ಸಾಲಿನಲ್ಲಿ ಪ್ರಕಟವಾಗಿರುವ ಸುದ್ದಿ ಟೀವಿಯಲ್ಲಿ ಇಡೀ ದಿನ ಪ್ರಸಾರ ವಾಗುತ್ತಿರುತ್ತದೆ. ಟೀವಿ ನೋಡದವನೇ ಧನ್ಯ ಎಂಬ ಭಾವನೆ ಬರುತ್ತೆ. ಈ ತಲೆನೋವನ್ನು ಹೇಳಿದರೆ ಗೊತ್ತಾಗುವುದಿಲ್ಲ ಅನುಭವಿಸಿದವರಿಗೇ ಗೊತ್ತು. ನೀವು ಏನಂತೀರಿ?

–ವಿ. ಹೇಮಂತ ಕುಮಾರ್, ಬೆಂಗಳೂರು

ವಾರದ ಪತ್ರ

## ಸುದ್ದಿಯೋ? ಕಾಮೆಂಟರಿಯೋ?

ಕನ್ನಡದ ಕೆಲವು ನ್ಯೂಸ್ ಚಾನೆಲ್‌ಗಳು ವಿವಾದಾಸ್ಪದ ಸಿ.ಡಿ ಬಗೆಗೆ ನೀಡುತ್ತಿರುವ ಕವರೇಜ್, ಸುದ್ದಿ ಪ್ರಸಾರವೋ ಅಥವಾ ರನ್ನಿಂಗ್ ಕಾಮೆಂಟರಿಯೋ ಎನ್ನುವ ಗೊಂದಲವನ್ನು ಹುಟ್ಟು ಹಾಕಿದೆ. ವಿಚಾರಣೆಯ ಬೆಳವಣಿಗೆ ಬಗ್ಗೆ ವೀಕ್ಷಕರಿಗೆ ಮಾಹಿತಿ ಕೊಡುವುದರಲ್ಲಿ ಯಾವುದೇ ತಪ್ಪಿಲ್ಲ. ಆದರೆ ಅದನ್ನು ಸಂಕ್ಷಿಪ್ತವಾಗಿ ಹೇಳದೇ ಕ್ರಿಕೆಟ್ ಪಂದ್ಯದ ಕಾಮೆಂಟರಿಯಂತೆ ರಂಜನೀಯವಾಗಿ ದಿನಗಟ್ಟಲೇ ಹೇಳುವುದು ನಮಗೆ ಹಿಡಿಸಲಿಲ್ಲ. ಸಂತ್ರಸ್ತೆಯ ಮೆಡಿಕಲ್ ಟೆಸ್ಟ್ ವಿವರ ಹೇಳಿದ ವೈಖರಿಯನ್ನು ಬಹುತೇಕ ವೀಕ್ಷಕರು ಸಮ್ಮತಿಸಿಲ್ಲ. ಸಂತ್ರಸ್ತೆ ನ್ಯಾಯಾಲಯಕ್ಕೆ ಹಾಜರಾಗುವ ದಿನದ ಕವರೇಜ್ ಕ್ರಿಕೆಟ್ ಕಾಮೆಂಟರಿಯನ್ನೂ ಕುಬ್ಜವಾಗಿಸಿದವು. ಸುದ್ದಿ ಪ್ರಸಾರದ ಮೂಲ ಉದ್ದೇಶ ಮಾಹಿತಿ ಪ್ರಸಾರವೇ ಹೊರತು ಮನರಂಜನೆಯಲ್ಲ?

–ರಮಾನಂದ ಶರ್ಮಾ, ನವದೆಹಲಿ

## ಬೇಕಾ ಇಷ್ಟು ನೀಚತನ?

ಕನ್ನಡ ಕಲರ್ಸ್ 'ನಮ್ಮನೆ ಯುವರಾಣಿ'ಯ ಅಹಲ್ಯಾ ಪಾತ್ರದ ಕಥೆ ಬಹುತೇಕ ಮುಗಿದಂತೆ ಇದೆ. ಸ್ವಂತ ಮಾವನನ್ನೇ ತನ್ನ ತಾಯಿಯ ಗಂಡನೆಂದು ಮನೆಯವರೆಲ್ಲರಿಗೂ ನಂಬಿಸಿ ಕೀಳು ಮಟ್ಟಕ್ಕೆ ಇಳಿದಿದ್ದಾಳೆ. ಮೈದುನನನ್ನು ಕೊಲೆ ಮಾಡಲು ಯತ್ನಿಸಿದ್ದಲ್ಲದೆ ಮಕ್ಕಳಿಗೆಂದು ಗಂಡ ಮಾಡಿದ ಅಡುಗೆಗೆ ವಿಷ ಹಾಕಿಸಿ ಗಂಡನಿಗೂ ಅವಮಾನವಾಗುವಂತೆ ಮಾಡುತ್ತಾಳೆ. ಇಂತಹ ನೀಚ ಕೃತ್ಯ ಮಾಡಿಯೂ ಏನೂ ಆಗಿಲ್ಲವೆಂಬಂತೆ ವರ್ತಿಸುವುದು ಅವಳು ನಿಜಕ್ಕೂ ಮನುಷ್ಯಳೇ ಅಲ್ಲ ಎಂದು ತೋರಿಸುತ್ತದೆ. ಇಷ್ಟಾದರೂ ಇನ್ನು ಕಥೆ ಮುಂದುವರಿಯುತ್ತಿರುವುದು ತೀರಾ ಅಸಹ್ಯ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಗೋಳಾಟ ತಪ್ಪಲಿ

ಸ್ಟಾರ್ ಸುವರ್ಣದ 'ಯಡಿಯೂರು ಶ್ರೀ ಸಿದ್ದಲಿಂಗೇಶ್ವರ'ದಲ್ಲಿ ಕೆಲವು ವಾರಗಳಿಂದ ಸಿದ್ದಲಿಂಗನ ಪರಿಸ್ಥಿತಿ ನೋಡಿ ಕಣ್ಣೀರು ಬರುತ್ತಿದೆ. ಕೂಡಲೇ ಅವನ ಗೋಳನ್ನು ಮುಗಿಸಿ ಸಂತೋಷದ ಸನ್ನಿವೇಶವನ್ನು ಸೃಷ್ಟಿಸಬೇಕು ಎಂದು ವಿನಂತಿ. ಈ ಕಥೆಯನ್ನು ಸಾಕಷ್ಟು ಜನ ಭಕ್ತಿ ಭಾವದಿಂದ ನೋಡುತ್ತಾರೆ. ಅವರ ಭಾವನೆಗೆ ಧಕ್ಕೆ ಆಗದಿರಲಿ.

–ಬಸವರಾಜ ಹರಿಹರ, ಧಾರವಾಡ

## ವಿನೂತನ ಸಂಗೀತ

ಚಂದನ ವಾಹಿನಿಯಲ್ಲಿ ಪ್ರತಿದಿನ ರಾತ್ರಿ 10ಗಂಟೆಗೆ 'ಮರೆಯದ ಮಾಣಿಕ್ಯ' ಸಂಗೀತ ಕಾರ್ಯಕ್ರಮವನ್ನು ಗುರುರಾಜ್ ಅವರು ತುಂಬಾ ಚೆನ್ನಾಗಿ ನಡೆಸಿಕೊಡುತ್ತಿದ್ದಾರೆ. ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ವಿಶೇಷ ಪ್ರತಿಭೆಗಳನ್ನು ಹೆಕ್ಕಿ ಕಲಾಸೇವೆ ಮಾಡುತ್ತಿರುವುದು ಸ್ತುತ್ಯಾರ್ಹ. ಹಿರಿಯ ಹಿನ್ನೆಲೆ ಗಾಯಕರಿಗೆ ಗೌರವ ನೀಡುತ್ತಿದ್ದಾರೆ. ವೃತ್ತಿಯಲ್ಲಿ ಬೇರೆಯಿದ್ದರು ಪ್ರವೃತ್ತಿಯಲ್ಲಿ ಸಂಗೀತೋಪಾಸನೆ ಮಾಡುವ ಕಲಾವಿದರಿಗೆ ಧನ್ಯವಾದಗಳು.

–ಕೆ.ಎನ್. ಶ್ವೇತ, ತುಮಕೂರು

## ಶ್ರೀಗಂಧವೇ ಸರಿ

ಚಂದವೋ ಚಂದ ಚಂದನದ ಕಾರ್ಯಕ್ರಮಗಳು. ಅದರಲ್ಲೂ ಎಲ್ಲರ ಮನ ಸೂರೆಗೊಂಡಿರುವ 'ಥಟ್ ಅಂತ ಹೇಳಿ' ಕಾರ್ಯಕ್ರಮ ಇತ್ತೀಚೆಗೆ ತುಂಬಾ ಸೊಗಸಾಗಿ ಮೂಡಿಬರುತ್ತಿದೆ. ಗ್ರಾಮೀಣ ಸೊಗಡನ್ನು ಬಿಂಬಿಸುವ ಗಾದೆಗಳು, ಪದಪುಂಜಗಳು ಸಂತೋಷ ನೀಡುವುದರ ಜೊತೆಗೆ ಬಾಲ್ಯ ಜೀವನವನ್ನು ನೆನಪು ಮಾಡುತ್ತಿದೆ. ಹಸನ್ಮುಖಿ ನಾ. ಸೋಮೇಶ್ವರ ಅವರ ನಿರೂಪಣೆ ಮಾಧುರ್ಯತೆ ಹೊಂದಿದೆ. ವಾಹಿನಿ 'ಚಂದನ' ನಿಜವಾಗಲೂ ಶ್ರೀ ಗಂಧ.

–ಕೆ. ಹೊನ್ನಪ್ಪ, ಕ್ಯಾತ್ಸಂದ್ರ